**2** ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ, ರವರ ನ್ಯಾಯಾಲಯ, ಪಾಂಡವಪುರ

ಸಿ.ಸಿ. ನಂಬ್ರ: **36/2022** ಸಿ.ಡಬ್ಲ್ಯೂ: **1** ಪಿ.ಡಬ್ಲ್ಯೂ: **1**

ಸಾಕ್ಷಿದಾರರ ಹೇಳಿಕೆಗಳು -

ಸಾಕ್ಷಿಯ ಹೆಸರು - ಮನುಜ

ಗಂಡನ ಹೆಸರು - ಜಿ. ಶಿವಣ್ಣ

ವಯಸ್ಸು - 28 ವರ್ಷ

ಉದ್ಯೋಗ - ಗೃಹಿಣಿ

ವಾಸ ಸ್ಥಳ - ಹರಳಹಳ್ಳಿ ಗ್ರಾಮ, ಪಾಂಡವಪುರ

ದಿನಾಂಕ: 11.09.2023 ರಂದು ಸಾಕ್ಷಿಯನ್ನು ಕರೆದು ಪ್ರಮಾಣವಚನ ಬೋಧಿಸಲಾಯಿತು.

ಮುಖ್ಯವಿಚಾರಣೆ ಮಾನ್ಯ ಸ.ಸ.ಅ.ರವರಿಂದ:

ಚಾಸಾ-2 ನನ್ನ ತಾಯಿ, ಚಾಸಾ-3, 4 ನಮ್ಮ ಮನೆಯ ನೆರೆಕೆರೆಯವರು. ಮೃತ ಗೋಪಾಲ ನನ್ನ ತಂದೆ, ಅವರು ಅಪಘಾತದಿಂದ ಮೃತಪಟ್ಟಿರುತ್ತಾರೆ.

ದಿನಾಂಕ 08.08.2020 ರಂದು ಸಂಜೆ 5.30 ಗಂಟೆ ಸಮಯದಲ್ಲಿ ನಾನು ಮತ್ತು ನನ್ನ ತಂದೆ ಕಾಲುವೆಯಿಂದ ಪಾತ್ರೆ ತೊಳೆದುಕೊಂಡು ಹರಳಹಳ್ಳಿ ಕಾಲುವೆಯ ಬಳಿ ಇರುವ ಮೈಸೂರು-ನಾಗಮಂಗಲ ರಸ್ತೆಯ ಎಡಬದಿಯಲ್ಲಿ ನಡೆದುಕೊಂಡು ಹೋಗುತ್ತಿದ್ದಾಗ, ನಮ್ಮ ಹಿಂದೆಯಿಂದ ಲಾರಿ ನಂಬರ ಕೆಎ-11 ಬಿ-9886 ನಿರ್ಲಕ್ಷತನದಿಂದ ಸದರಿ ಲಾರಿಯ ಚಾಲಕನು ಲಾರಿಯನ್ನು ಚಲಾಯಿಸಿಕೊಂಡು ಬಂದು ನನ್ನ ತಂದೆಗೆ ಡಿಕ್ಕಿಪಡಿಸಿದ ಪರಿಣಾಮ ನನ್ನ ತಂದೆ ರಸ್ತೆಯ ಮೇಲೆ ಬಿದ್ದು, ತಲೆಗೆ ಗಂಭೀರ ಸ್ವರೂಪದ ಗಾಯಗಳಾಗಿದ್ದು, ಕೈ ಕಾಲುಗಳಿಗೆ ಗಾಯಗಳಾಗಿದ್ದು, ಅಕ್ಕಪಕ್ಕದವರೆಲ್ಲರೂ ಬಂದು ನನ್ನ ತಂದೆಯವರನ್ನು ಉಪಚರಿಸಿದ ನಂತರ ಸ್ಕೂಟರ್ ಒಂದರಲ್ಲಿ ನನ್ನ ತಂದೆಯನ್ನು ಪಾಂಡವಪುರ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋದಾಗ ಅಲ್ಲಿ ವೈದರು ನನ್ನ ತಂದೆಯನ್ನು ಪರೀಕ್ಷಿಸಿ ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿನ ಕೆ ಆರ್ ಎಸ್ ಹೆಚ್ಚಿನ ಚಿಕಿತ್ಸೆಗಾಗಿ ಆಸ್ಪತ್ರೆಗೆ ಕಳುಹಿಸಿರುತ್ತಾರೆ, ನಂತರ ಅಲ್ಲಿ ವೈದ್ಯರು ಪರೀಕ್ಷಿಸಿ ಡಿ ಆರ್ ಎಂ ಆಸ್ಪತ್ರೆಗೆ ಹೆಚ್ಚಿನ ಚಿಕಿತ್ಸೆಗಾಗಿ ಕರೆದುಕೊಂಡು ಹೋಗಬೇಕು ಎಂದು ತಿಳಿಸಿದರು.

ಮರುದಿನ ಸಂಜೆ 6.00 ಗಂಟೆಗೆ ಚಿಕಿತ್ಸೆ ಫಲಕಾರಿಯಾಗದೇ ನನ್ನ ತಂದೆ ಮೃತ ಹೊಂದಿರುತ್ತಾರೆ. ನಾನು ಅಪಘಾತವಾದ ಮರುದಿನ ಪೋಲಿಸರಿಗೆ ದೂರನ್ನು ನೀಡಿರುತ್ತೇನೆ.

3. ಸಾಕ್ಷಿಯು ದೂರಿನಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ದೂರನ್ನು ನಿಪಿ-1 ಹಾಗೂ ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-1 (ಎ) ಎಂದು ಗುರುತಿಸಲಾಯಿತು. ಚಿಕಿತ್ಸೆ ಫಲಕಾರಿಯಾಗದೇ ಡಿ ಆರ್ ಎಂ ಆಸ್ಪತ್ರೆಯಲ್ಲಿ ನನ್ನ ತಂದೆ ಮೃತಪಟ್ಟ ನಂತರ ನಾನು ಪೋಲಿಸರಿಗೆ ಮರು ದೂರನ್ನು ನೀಡಿರುತ್ತೇನೆ. ಸಾಕ್ಷಿಯು ಮರು ದೂರಿನಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ಮರು ದೂರನ್ನು ನಿಪಿ-2 ಹಾಗೂ ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-2 (ಎ) ಎಂದು ಗುರುತಿಸಲಾಯಿತು.

4. ದಿನಾಂಕ 09.08.2021 ರಂದು ಮಧಾಹ್ನ 12.00 ಗಂಟೆಗೆ ನಾನು ಅಪಘಾತವಾದ ಸ್ಥಳವನ್ನು ಪೋಲಿಸರಿಗೆ ತೋರಿಸಿದ್ದು, ಸದರಿ ಸ್ಥಳವನ್ನು ಸಾಕ್ಷಿದಾರರಾದ ಚಾಸಾ-3 ಮತ್ತು 6 ರವರ ಸಮಕ್ಷಮದಲ್ಲಿ ಪರಿಶೀಲಿಸಿ, ಮಹಜರ ಮತ್ತು ನಕಾಶೆಯನ್ನು ತಯಾರಿ ಮಾಡಿರುತ್ತಾರೆ. ನಾನು ಸದರಿ ದಾಖಲೆಗೆ ಸಹಿಯನ್ನು ಮಾಡಿರುತ್ತೇನೆ. ಸಾಕ್ಷಿಯು ಮಹಜರನಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ಮಹಜರನ್ನು ನಿಪಿ-3 ಹಾಗೂ ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-3 ಎ ಎಂದು ಗುರುತಿಸಲಾಯಿತು.

ಅಪಘಾತ ಮಾಡಿದ ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ, ಸಾಕ್ಷಿಯು ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸಿದರು.

<u>ಪಾಟಿ ಸವಾಲು ಆರೋಪಿ ಪರ ವಕೀಲರವರಿಂದಃ</u>

ಸಮಯಾವಕಾಶ ನೀಡಲಾಗಿದೆ

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ ಎಂದರು

**2** ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ
ನ್ಯಾಯಾಲಯ, ಪಾಂಡವಪುರ